ಓ.ಎಸ್. ನಂಃ 394/2022
ಡಿ.ಡಬ್ಲ್ಯು-1 (ಮಹಾದೇವ)

ದಿನಾಂಕ: 11-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಲ್.ಎಸ್.ಬಿ. ಪ್ರತಿವಾದಿ ಪರ ವಕೀಲರಿಂದಃ</u>**

ನಾನು 10ನೇ ತರಗತಿವರೆಗೆ ಓದಿದ್ದೇನೆ. ನನ್ನ ತಕರಾರಿನಲ್ಲಿ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡುವ ಪೂರ್ವದಲ್ಲಿ ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ.

2. ನಾನು ಖಾಯಂ ಆಗಿ ಹಡಗಿನಾಳ ಗ್ರಾಮದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಹಡಗಿನಾಳ, ಅಡಿಬಟ್ಟಿ, ಚಿಗದೋಳ್ಳಿ, ಕಲಾರಕೊಪ್ಪ, ಉದಗಟ್ಟಿ ಈ ಎಲ್ಲ ಊರುಗಳು ಹೊಳೆಯ ದಂಡೆ ಮೇಲೆ ಇವೆ ಎಂದರೆ ಸರಿ. ಜಾಸ್ತಿ ಮಳೆ ಬಂದ ಪಕ್ಷದಲ್ಲಿ ಸದರಿ ಊರುಗಳು ಮುಳುಗುತ್ತವೆ ಎಂದರೆ ಸರಿ. 2017ನೇ ಸಾಲಿನಲ್ಲಿ ತುಂಬಾ ಮಳೆಯಾಗಿ ಸದರಿ ಊರುಗುಳು ಮುಳುಗಿದ್ದವು ಎಂದರೆ ಸರಿಯಲ್ಲ. ಸದರಿ ಊರುಗಳು 2017ರಲ್ಲಿ ಮುಳುಗಿದ್ದರೂ ಸಹ ಮುಳುಗಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ಸಮಯದಲ್ಲಿ ನಮಗೆ ಮನೆ ಕಟ್ಟಲು ಅಡಚಣೆ ಇದ್ದಿದ್ದಕ್ಕಾಗಿ ಹಾಗೂ ಕುಟುಂಬದ ಇತರೇ ಖರ್ಚಿಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ವಾದಿಯಿಂದ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ

ನಮ್ಮ ತಂದೆ ಅಂಚೆ ಇಲಾಖೆಯಲ್ಲಿ ಪೋಸ್ಟಮನ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನಮ್ಮ ತಂದೆ ಹಡಗಿನಾಳ, ಕಲಾರಕೊಪ್ಪ ಮತ್ತು ಉದಗಟ್ಟಿ ಈ ಗ್ರಾಮಗಳಿಗೆ ಪೋಸ್ಟಮನ್ ಆಗಿ 25 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ಗ್ರಾಮೀಣ ಪ್ರದೇಶದಲ್ಲಿ ನಮ್ಮ ತಂದೆ ಕೆಲಸ ಮಾಡುತ್ತಿದ್ದುದ್ದರಿಂದ ನಮ್ಮ ತಂದೆಗೆ ಆಗ ರೂ.500/- ರಿಂದ ರೂ.700/- ಸಂಬಳ ಬರುತ್ತಿತ್ತು ಎಂದರೆ ಸರಿಯಲ್ಲ.

4. ದಾವಾ ಆಸ್ತಿ ನಮಗೆ ನಮ್ಮ ತಾಯಿಯ ತಾಯಿಯ ಕಡೆಯಿಂದ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಉತ್ತರ- ದಿಕ್ಷಿಣವಾಗಿ ಇದೆ ಎಂದರೆ ಸರಿ. ನನ್ನ ಅಜ್ಜಿಗೆ ನನ್ನ ತಾಯಿ ಹಾಗೂ ವಾದಿಯ ತಾಯಿ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ನನ್ನ ಅಜ್ಜಿ ತಮ್ಮ ಆಸ್ತಿಯಲ್ಲಿ ನನ್ನ ತಾಯಿಗೆ ಅರ್ಧ ಹಾಗೂ ವಾದಿಯ ತಾಯಿಗೆ ಅರ್ಧ ಹಂಚಿ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಮ್ಮ ತಾಯಿ ಅರ್ಧ ಮತ್ತು ವಾದಿಯ ತಾಯಿ ಅರ್ಧ ಸಾಗು ಮಾಡುತ್ತಿದ್ದರು ಮತ್ತು ತಮ್ಮ ಪಾಲುಗಳಿಗೆ ಬದುವು ಹಾಕಿದ್ದರು ಎಂದರೆ ಸರಿಯಲ್ಲ.

5. ವಾದಿಯ ತಾಯಿ ನಿಂಗವ್ವ ಇವರು 01ಎಕರೆ 24ಗುಂಟೆಯಲ್ಲಿ ಹಾಗೂ ನಾವು 01ಎಕರೆ 24ಗುಂಟೆಯಲ್ಲಿ ಕಬ್ಜೆಯಲ್ಲಿ ಇದ್ದೇವೆ ಎಂದರೆ ಸರಿ. ಪೂರ್ವಕ್ಕೆ- ವಾದಿಯ ತಾಯಿ ನಿಂಗವ್ವ ಇವರ ಜಮೀನು, ಪಶ್ಚಿಮಕ್ಕೆ- ವೆಂಕಪ್ಪ ಸಿದ್ದಪ್ಪ ಅಡವಿ ಇವರ ಜಮೀನು, ಉತ್ತರಕ್ಕೆ- ರಾಮಪ್ಪ ಅಡವಯ್ಯಾ ಮಠದ ಇವರ

ಜಮೀನು, ದಕ್ಷಿಣಕ್ಕೆ- ರಸ್ತೆ ಎಂದರೆ ಸರಿ. ಸದರಿ ಚಕ್ಕಬಂದಿಯಲ್ಲಿಯ ಜಮೀನವನ್ನು ದಿನಾಂಕ 11/07/2017 ರಂದು ವಾದಿಗೆ ಮಾರಾಟ ಮಾಡಲು ಒಪ್ಪಿ, ದಸ್ತು ಬರಹಗಾರರಿಗೆ ಮಾಹಿತಿ ಕೊಟ್ಟು, ಖರೀದಿ ಕರಾರ ಪತ್ರ ಬರೆದುಕೊಟ್ಟು ನಮ್ಮ ಆಸ್ತಿಯನ್ನು ರೂ.6,00,000/- ಕ್ಕೆ ಮಾರಾಟ ಮಾಡಲು ಒಪ್ಪಿ ಅದರ ಪೈಕಿ ರೂ.5,16,000/- ಮುಂಗಡವಾಗಿ ವಾದಿಯಿಂದ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

6. ಯಾವುದೇ ವ್ಯವಹಾರ ಮಾಡಲು ನಾನು ಮತ್ತು ನನ್ನ ತಂದೆ ಸೇರಿ ಮಾಡುತ್ತೇವೆ ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರಿಗೆ ತಮ್ಮ ವಕೀಲ ಪತ್ರವನ್ನು ತೋರಿಸಿದ್ದು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಸಾಕ್ಷಿದಾರರಿಗೆ ತಮ್ಮ ಲಿಖಿತ ಹೇಳಿಕೆಯನ್ನು ಹಾಗೂ ಸಾಕ್ಷಿ ಪ್ರಮಾಣ ಪತ್ರವನ್ನು ತೋರಿಸಿದ್ದು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಈಗ ಸಾಕ್ಷಿದಾರರಿಗೆ ನಿಪಿ-1ನ್ನು ತೋರಿಸಿದ್ದು, ನಿಪಿ-1 ರಲ್ಲಿ ನಿಪಿ-1ಬಿ ಎಂದು ಗುರುತಿಸಿದ ಸಹಿ ತಮ್ಮದು ಎಂದು ಸೂಚಿಸಿದರೆ ಅದು ತಮ್ಮದು ಅಲ್ಲ ಎಂದು ಹೇಳುತ್ತಾರೆ.

7. ಈ ದಾವೆಗೆ ಲಿಖಿತ ಹೇಳಿಕೆ ಸಲ್ಲಿಸುವಾಗ ಖರೀದಿ ಕರಾರ ಪತ್ರಕ್ಕೆ ನನ್ನ ಸಹಿ ಇರುವುದಿಲ್ಲ ಎಂದು  ಮಾಹಿತಿ ಕೊಟ್ಟಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ಖರೀದಿ ಕರಾರ ಪತ್ರಕ್ಕೆ ನನ್ನ ಸಹಿಯನ್ನು ತೆಗೆದುಕೊಂಡಿದ್ದಾರೆ ಎಂದು

ಬರೆಯಿಸಿರುತ್ತೇನೆ ಹಾಗೂ ವಿಶ್ವಾಸದ ಮೇಲೆ ನನ್ನ ಸಹಿಯನ್ನು ಮಾಡಿದ್ದೇನೆ ಎಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಯಾವ ಯಾವ ದಾಖಲೆಗಳನ್ನು ಹಾಜರ ಮಾಡಿದ್ದೇನೆಂದು ನಮ್ಮ ವಕೀಲರಿಗೆ ಕೇಳಿ ತಿಳಿದಕೊಂಡಿದ್ದೇನೆ.

8. ವಾದಿ ನನಗೆ ಸುಮಾರು ಬಾರಿ ದಾವಾ ಆಸ್ತಿಯ ನಕಾಶೆ ಮಾಡಿಕೊಡಿ ಎಂದು ಸಾಕಷ್ಟು ಬಾರಿ ಕೇಳಿದ್ದರೂ ಸಹ ನಾನು ಕೊಡದೇ ಇದ್ದುದ್ದಕ್ಕಾಗಿ ತಮ್ಮ ವಕೀಲರಿಂದ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯು ಬಾಕಿ ಉಳಿದ ಖರೀದಿ ಮೊತ್ತ ತಮ್ಮ ಬಳಿ ತಯಾರ ಇದೆ ಅದನ್ನು ಪಡೆದು ನಕಾಶೆ ಮಾಡಿಕೊಡಿ ಎಂದು ಸುಮಾರು ಬಾರಿ ಕೇಳಿದ್ದರು ಎಂದರೆ ಸರಿಯಲ್ಲ. ನಾನು ಖರೀದಿ ಪತ್ರ ಬರೆದುಕೊಡದೇ ಇದ್ದುದ್ದರಿಂದ ವಾದಿ ತಮ್ಮ ವಕೀಲರಿಂದ ನೋಟೀಸು ಕಳುಹಿಸಿದ್ದನ್ನು ನಾನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ನೋಟೀಸನ್ನು ತಿರಸ್ಕರಿಸಿದ ಪೋಸ್ಟಮನ್ ಸುಳ್ಳು ಹಿಂಬರ ಬರೆದಿದ್ದಾರೆ ಎಂದು ಸಂಬಂಧಪಟ್ಟ ಪೋಸ್ಟಮನ್ ಮೇಲೆ ನಾನು ಯಾವುದೇ ಅರ್ಜಿ ಬರೆದಿಲ್ಲ. ಪೋಸ್ಟಮನ್ ಮೇಲೆ ಅರ್ಜಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ.

9. ಈ ದಾವೆಯಲ್ಲಿ ನನಗೆ ಸಮನ್ಸ ಬಂದ ನಂತರ ನಮ್ಮ ವಕೀಲರಿಂದ ಹಾಜರಾಗುವ ಪೂರ್ವದಲ್ಲಿ ವಾದಿ ಕೊಟ್ಟ ನೋಟೀಸಿಗೆ ನಾನು ಉತ್ತರ ಕೊಟ್ಟಿಲ್ಲ. ಸದರಿ ನೋಟೀಸಿಗೆ ನನಗೆ ಉತ್ತರ ಕೊಡಲು ತೊಂದರೆ ಇರಲಿಲ್ಲ.

10. ಖರೀದಿ ಕರಾರ ಪತ್ರ ಬರೆದುಕೊಡುವಾಗ ಯಾವುದೇ ತಡಯಾಜ್ಞೆ ಇರಲಿಲ್ಲ ಎಂದರೆ ತಾವು ಖರೀದಿ ಕರಾರ ಪತ್ರ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ. ವಾದಿಯ ತಾಯಿ ನನ್ನ ಮೇಲೆ ಒಂದು ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಯ ತಾಯಿ ಓ.ಎಸ್.ನಂ.487/2012 ರಲ್ಲಿ ಒಂದು ದಾವೆ ನನ್ನ ಮೇಲೆ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 10ನೇ ಖಂಡಿಕೆಯಲ್ಲಿ ಹೇಳಿರುವ ಓ.ಎಸ್.ನಂ.487/2012ರ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ವಾದಿಯ ತಾಯಿ ಈ ವ್ಯವಹಾರದ ಬಗ್ಗೆ ಲಿಖಿತ ರೂಪದಲ್ಲಿ ನಮಗೆ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ವಾದಿಯು ಟೇಲರಿಂಗ್ ಕೆಲಸ ಮಾಡುತ್ತಾರೆ ಮತ್ತು ವಾದಿಗೆ ಬಗರನಾಳದಲ್ಲಿ ಜಮೀನು ಇದೆ ಹಾಗೂ ವಾದಿಯ ಗಂಡು ಮತ್ತು ಹೆಣ್ಣು ಮಕ್ಕಳು ನೌಕರಿ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇದೆ ಎಂದರೆ ಸರಿಯಲ್ಲ. ವಾದಿ ನನ್ನ ದೊಡ್ಡಮ್ಮನ ಮಗಳು ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ